(ಇಂದು ದಿನಾಂಕಃ 12-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ MSS ವಕೀಲರಿಂದಃ**

ದಾವಾ ಸ್ವತ್ತುಗಳು ಹಿರಿಯರಿಂದ ಬಂದ ಸ್ವತ್ತುಗಳಾಗಿರುತ್ತವೆ. ದಾವಾ ಸ್ವತ್ತು .ಡಿ. ಹಿರಿಯರಿಂದ ಬಂದ ಆಸ್ತಿಯಲ್ಲ ಎಂದರೆ ಸರಿ. ಕೊಳ್ಳದ ಹೊಲ ಮಾರಾಟ ಮಾಡಿದ ಬಗ್ಗೆ ತೋರಿಸಲು ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ನನ್ನ ತಾಯಿ ಯಾರ ಸಂಗಡ ಹೋಗಿರುವುದಿಲ್ಲ.

ನನಗೆ ಬಕ್ಕಪ್ಪ ಮುಕಾಳೆ ಗೊತ್ತು. ಅವರ ಊರು ಹಸರಗುಂಡಗಿ. ಅವರ ಮೊದಲನೆ ಹೆಂಡತಿ ಹೆಸರು ರತ್ನಮ್ಮ. ನನ್ನ ವಯಸ್ಸು 5 ಮತ್ತು ನನ್ನ ತಂಗಿಯ ವಯಸ್ಸು 3 ಇದ್ದಾಗ ನನ್ನ ತಾಯಿ ನಮ್ಮ ತಂದೆಯ ಜೊತೆ ಸಾಂಪ್ರದಾಯಿಕವಾಗಿ ವಿಚ್ಛೇದನೆ ಪಡೆದು ಬಕ್ಕಪ್ಪ ಮುಕಾಳೆಯವರ ಜೊತೆ ಸಂಸಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂಗಿ ಸರಸ್ವತಿ ಒಬ್ಬರ ಜೊತೆ ಸಂಸಾರ ಮಾಡಿರುತ್ತೇವೆ ಎಂದರೆ ಸರಿ. ಅದೇ ರೀತಿ ರತ್ನಮ್ಮ ಮತ್ತು ಸೈದಮ್ಮ ಒಬ್ಬರ ಜೊತೆ ಸಂಸಾರ ಮಾಡಿರುತ್ತಾರೆ ಎಂದರೆ ಸರಿ.

ನಮ್ಮ ತಾಯಿ ನಮ್ಮನ್ನು ಬಿಟ್ಟು ಹೋದ ನಂತರ ನಮ್ಮ ತಂದೆ ನಮ್ಮನ್ನು ನೋಡಿಕೊಳ್ಳಲು ಸುಭದ್ರಮ್ಮನ ಜೊತೆ ಮದುವೆಯಾಗಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಸರಸ್ವತಿಯ ಪಾಲನೆ ಪೋಷಣೆ ನಂತರ ಮದುವೆಯನ್ನು ನನ್ನ ತಂದೆ ಮತ್ತು ಸುಭದ್ರಮ್ಮರವರೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಮದುವೆಯಾದ ನಂತರ ಸಂಪ್ರದಾಯದ ಪ್ರಕಾರ ಎಲ್ಲಾ ಖರ್ಚು ವೆಚ್ಚಗಳನ್ನು ಸುಭದ್ರಮ್ಮ ಮತ್ತು ನನ್ನ ತಂದೆ ನಿರ್ವಹಿಸಿರುತ್ತಾರೆ ಎಂದರೆ ಸರಿ.

ನನ್ನ ತಂದೆ ಹಿರಿಯರ ಮತ್ತು ನಮ್ಮ ಸಮಕ್ಷಮ ಹಾಗೂ ನಮ್ಮ ಇನ್ನಿತರ ಕುಟುಂಬದ ಸದಸ್ಯರ ಸಮಕ್ಷಮ ದಾವಾ ಆಸ್ತಿಗಳಲ್ಲಿ ಮೌಖಿಕವಾಗಿ ಪಾಲು ವಿಭಾಗ ಮಾಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ನಮ್ಮ ತಂದೆ ಆತನ ಹೆಸರಿಗೆ 4 ಎಕರೆ ಹೊಲವನ್ನು ಇಟ್ಟುಕೊಂಡಿರುತ್ತಾರೆ. ಆ ಹೊಲವನ್ನು ನನಗೆ ಮತ್ತು ಸರಸ್ವತಿಗೆ ಕೊಡುತ್ತೇನೆ ಎಂದು ಇಟ್ಟುಕೊಂಡಿರುತ್ತಾರೆ. ಆ ಬಗ್ಗೆ ನಾಲ್ಕು ಜನರ ಮುಂದೆ ಸ್ಟಾಂಪನ್ನು ಬರೆದಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಅದನ್ನು ಅವರೆ ಇಟ್ಟುಕೊಂಡಿರುತ್ತಾರೆ. ನಮ್ಮ ತಂದೆ 4 ಎಕರೆ ಹೊಲವನ್ನು ನಮಗೆ ಕೊಡುತ್ತಾರೆ ಎಂದು ಸ್ಟಾಂಪನ್ನು ಬರೆದು ಅದನ್ನು ಅವರೆ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಸ.ನಂ. 13 ರ ಕ್ಷೇತ್ರ 13 ಎಕರೆ 23 ಗುಂಟೆ ಪೈಕಿ 3 ಎಕರೆ 16 ಗುಂಟೆ ಮತ್ತು ಸ.ನಂ. 17 ರ ಕ್ಷೇತ್ರ 2 ಎಕರೆ 9 ಗುಂಟೆ ಪೈಕಿ 23 ಗುಂಟೆ ಜಮೀನನ್ನು ನನಗೆ ಮತ್ತು ನನ್ನ ತಂಗಿ ಸರಸ್ವತಿಗೆ ಮೌಖಿಕವಾಗಿ ನಮ್ಮ ತಂದೆ ಪಾಲು ನೀಡಿರುತ್ತಾರೆ ಎಂದರೆ ಸರಿ.

ಸ.ನಂ. 150 ಕ್ಷೇತ್ರ 10 ಎಕರೆ 11 ಗುಂಟೆ ಪೈಕಿ 2 ಎಕರೆ 23 ಗುಂಟೆ, ಸ.ನಂ. 185/3 ಕ್ಷೇತ್ರ 4 ಎಕರೆ 00 ಗುಂಟೆಯನ್ನು ಸುಭದ್ರಮ್ಮ ಮತ್ತು ಅವರ ಮಕ್ಕಳಿಗೆ ಮೌಖಿಕವಾಗಿ ನಮ್ಮ ತಂದೆ ಪಾಲು ನೀಡಿರುತ್ತಾರೆ ಎಂದರೆ ಸರಿ.

ದಾವಾ ಸ್ವತ್ತು ಇ ಮನೆಯನ್ನು ಸುಭದ್ರಮ್ಮ ಹಾಗೂ ಆಕೆಯ ಮಕ್ಕಳಿಗೆ ವಾಸ ಮಾಡಲು ನಮ್ಮ ತಂದೆ ಅದನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಪಾಲಿಗೆ ಬಂದ ಜಮೀನುಗಳು ಹಸರುಗುಂಡಗಿ ಕೆರೆಯಲ್ಲಿ ಮುಳುಗಿರುತ್ತವೆ ಎಂದರೆ ಸರಿ. ಅದಕ್ಕೆ ಪರಿಹಾರದ ಹಣ ಬಂದಿರುತ್ತದೆ ಎಂದರೆ ಅದನ್ನೆಲ್ಲ ಸುಭದ್ರಮ್ಮ ತೆಗೆದುಕೊಂಡಿರುತ್ತಾಳೆ. ಸುಭದ್ರಮ್ಮ ಪರಿಹಾರ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಮೀನುಗಳ ಪರಿಹಾರವನ್ನು ನೀವೆ ಪಡೆಯಲು ಅರ್ಹರು ಇರುತ್ತೀರಿ ಎಂದರೆ ಸುಭದ್ರಮ್ಮನೆ ಪಡೆದಿರುತ್ತಾಳೆ. ಆ ಬಗ್ಗೆ ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ.

ಈಗಾಗಲೇ ದಾವಾ ಸ್ವತ್ತುಗಳಲ್ಲಿ ಪಾಲು ವಿಭಾಗ ಆಗಿದ್ದರಿಂದ ಪುನಃ ಪಾಲು ವಿಭಾಗ ಬೇಕು ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಪಾಲಿಗೆ ಬಂದ ಸ.ನಂ. 13 ಮತ್ತು 17 ರಲ್ಲಿ ನಮ್ಮ ಪಾಲಿಗೆ ಬಂದ ಮುಳುಗಡೆ ಆದ ಜಮೀನಿನ ಪರಿಹಾರವನ್ನು ಪಡೆಯಲು ನಾವೇ ಅರ್ಹರು ಎಂದರೆ ಸರಿಯಲ್ಲ.

ನಮ್ಮ ತಂದೆ ಪಾಲು ವಿಭಾಗ ಮಾಡಿಕೊಟ್ಟ ನಂತರ ನಮ್ಮ ಪಾಲಿಗೆ ಬಂದ ಆಸ್ತಿಗಳನ್ನು ನಾವೆ ಉಳುಮೆ ಮಾಡಿ ಆದಾಯ ಪಡೆಯುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೌಖಿಕ ಪಾಲು ವಿಭಾಗದ ಪ್ರಕಾರ ಪ್ರತ್ಯೇಕವಾಗಿ ಅವರ ಹೆಸರಿಗೆ ಕಂದಾಯ ಇಲಾಖೆಯಲ್ಲಿ ದಾಖಲು ಆಗದೆ ಇರುವ ಕಾರಣ ಆಸ್ತಿಗಳಲ್ಲಿ ಮತ್ತೆ ಪಾಲು ವಿಭಾಗ ಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆಗೆ 4 ಜನ ಅಣ್ಣ ತಮ್ಮಂದಿರು. ನಮ್ಮ ತಂದೆಯ 4 ಜನ ಅಣ್ಣತಮ್ಮಂದಿರ ಜಮೀನುಗಳು ಸಹ ಕೆರೆಯಲ್ಲಿ ಮುಳುಗಡೆ ಆಗಿವೆ ಎಂದರೆ ಸರಿ. ಅದೇ ರೀತಿ ಮುಳುಗಡೆಯಾದ ಜಮೀನುಗಳಿಗೆ ಪರಿಹಾರ ಮಂಜೂರಾತಿ ಮಾಡಿರುತ್ತಾರೆ ಎಂದರೆ ಸರಿ. ಮುಳುಗಡೆಯಾದ ಪರಿಹಾರವನ್ನು ನೀಡುವಂತೆ ನಮ್ಮ ತಂದೆಯ ಅಣ್ಣ ತಮ್ಮಂದಿರನ್ನು ನಾವು ಕೇಳಿರುವುದಿಲ್ಲ ನಮ್ಮ

ದೊಡ್ಡಮ್ಮ ಸುಭದ್ರಮ್ಮರವರನ್ನು ಕೇಳಿರುತ್ತೇವೆ ಅವರು ನಮಗೆ ನೀಡಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಕಲ್ಪಿಸಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.